ಎಂ.ವಿ.ಸಿ. ನಂಃ 1742/2025
ಪಿ.ಡಬ್ಲ್ಯೂ-1 (ಲಗಮಪ್ಪ)

ದಿನಾಂಕ: 17-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಬಿ.ಎನ್.ಸಿ. 2ನೇ ಎದುರುದಾರ ಪರ ವಕೀಲರಿಂದಃ**

ಮೃತ ಶಿವಾನಂದ ನನ್ನ ಮಗ. ನನ್ನ ಮಗ ಅಪಘಾತ ಆದ ಸಮಯದಲ್ಲಿ ಬಿ.ಎ. ಕೊನೆಯ ವರ್ಷದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಮೋಟರ ಸೈಕಲ ನಂ.KA-49/Y-3417 ನನ್ನ ಮಗ ಮೃತ ಶಿವಾನಂದ ಇವರ ಹೆಸರಿನಲ್ಲಿ ಇದೆ. ಈ ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ. ಈ ಅಪಘಾತದ ಬಗ್ಗೆ ನಾಗಪ್ಪ ಭೀಮಪ್ಪ ಗೋಕಾಕ ಇವರು ಹೇಳಿದ ನಂತರ ಗೊತ್ತಾಗಿರುತ್ತದೆ. ಸದರಿ ನಾಗಪ್ಪ ಭೀಮಪ್ಪ ಗೋಕಾಕ ಇವರು ಈ ಅಪಘಾತವನ್ನು ನೋಡಿರುತ್ತಾರೆ.

2. ಈ ಅಪಘಾತದ ಕುರಿತು ನನ್ನ ಸಣ್ಣ ಮಗ ದೂರು ಕೊಟ್ಟಿರುತ್ತಾರೆ. ದೂರು ಕೊಟ್ಟ ನನ್ನ ಸಣ್ಣ ಮಗ ಸಹ ಈ ಅಪಘಾತ ನೋಡಿಲ್ಲ. ಅಪಘಾತದ ಬಗ್ಗೆ ಮಾಹಿತಿ ಬಂದ ತಕ್ಷಣ ನನ್ನ ಸಣ್ಣ ಮಗ ಹಾಗೂ ಅಳಿಯ ಅಪಘಾತ ಆದ ಸ್ಥಳಕ್ಕೆ ಹೋಗಿ ಅಲ್ಲಿ ಇರುವ ಸ್ಥಿತಿಗತಿಗಳನ್ನು ಪರಿಶೀಲನೆ ಮಾಡಿ ಅದರ ಆಧಾರದ ಮೇಲೆ ದೂರು ಕೊಟ್ಟಿರುತ್ತಾರೆ.

3. ಅಪಘಾತ ಆದ ಸ್ಥಳದಲ್ಲಿ ಇದ್ದ ಅಂಗಡಿಯವರು ಮೋಟರ ಸೈಕಲನ್ನು ಬಾಹುರಾವ ಬಾಳಪ್ಪ ದಾನನ್ನವರ ಚಾಲನೆ ಮಾಡುತ್ತಿದ್ದರು, ನನ್ನ ಮಗ ಹಿಂಬದಿ ಸವಾರರಿದ್ದರು ಎಂದು ಹೇಳಿರುತ್ತಾರೆ. ಪ್ರಥಮ ವರ್ತಮಾನ ವರದಿಯಲ್ಲಿ ಲಕ್ಷ್ಮಣ ಭೀಮಪ್ಪ ನಿಡಶೋಶಿ ಇವರು ಟ್ರ್ಯಾಕ್ಟರ ನಡೆಸುತ್ತಿದ್ದರು ಎಂದು

ನಮೂದಿಸಲಾಗಿದೆ ಎಂದರೆ ಸರಿ. ಪೊಲೀಸರು ತನಿಖೆ ಮಾಡಿ 03 ಜನರ ಮೇಲೆ ಪೊಲೀಸರು ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಅಂತಿಮ ವರದಿಯಲ್ಲಿ ಮೃತ ನನ್ನ ಮಗನನ್ನು 3ನೇ ಆರೋಪಿಯಾಗಿ ತೋರಿಸಿದ್ದಾರೆ ಎಂದರೆ ಸರಿ.

4. ಅಪಘಾತ ಆದ ಸಮಯದಲ್ಲಿ ನನ್ನ ಮಗ ಮದ್ಯಪಾನ ಮಾಡಿ ಚಾಲನಾ ಪತ್ರ ಇಲ್ಲದೇ ಮೋಟರ ಸೈಕಲ ಚಾಲನೆ ಮಾಡುತ್ತಿದ್ದರು ಎಂದು ಹೇಳಿ 3ನೇ ಆರೋಪಿಯನ್ನಾಗಿ ಮಾಡಿದ್ದಾರೆ ಎಂದರೆ ಸರಿ. ನನ್ನ ಮಗನಿಗೆ ಮೋಟರ ಸೈಕಲ ಚಾಲನೆ ಮಾಡಲು ಚಾಲನಾ ಪತ್ರ ಇದೆ ಎಂದು ಹೇಳಿ ದಾಖಲೆಯನ್ನು ಹಾಜರಪಡಿಸಿಲ್ಲ ಎಂದರೆ ಸರಿ. ದೂರಿನಲ್ಲಿ ಮೃತ ಶಿವಾನಂದ ಇವರಿಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಚಾಲನಾ ಪತ್ರ ಇತ್ತು ಅದು ಕಳೆದು ಹೋಗಿದೆ ಎಂದು ಹೇಳಿಲ್ಲ ಎಂದರೆ ಸರಿ. ಲಕ್ಷ್ಮಣ ಭೀಮಪ್ಪ ನಿಡಸೋಶಿ ಇವರಿಗೆ ಟ್ರ್ಯಾಕ್ಟರ ಮತ್ತು ಟ್ರೇಲರ್ ಚಾಲನೆ ಮಾಡಲು ಚಾಲನಾ ಪತ್ರ ಇರುತ್ತದೆ ಎಂದು ನನಗೆ ಹೇಳಿರುತ್ತಾರೆ. ನಾನು ಸದರಿಯವರ ಚಾಲನಾ ಪತ್ರವನ್ನು ನೋಡಿಲ್ಲ.

5. ರಮೇಶ ಬಸಪ್ಪ ಪಾರಶಿ ಹಾಗೂ ಲಕ್ಷ್ಮಣ ಭೀಮಪ್ಪ ನಿಡಸೋಶಿ ಇವರ ಪರಿಚಯ ನನಗೆ ಇರುವುದಿಲ್ಲ ಹಾಗೂ ಸದರಿಯವರು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಅಂತಿಮ ವರದಿಯಲ್ಲಿ ಎಫ್.ಎಸ್.ಎಲ್ ವರದಿ ಪ್ರಕಾರ ಅಪಘಾತ ಆದ ಸಮಯದಲ್ಲಿ ನನ್ನ ಮಗ ಮದ್ಯಪಾನ ಸೇವನೆ ಮಾಡಿದ್ದರು ಎಂದು ಹೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

6. ಅಪಘಾತ ಆದ ಸಮಯದಲ್ಲಿ ನನ್ನ ಮಗ ಮೋಟರ ಸೈಕಲ ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾಗಪ್ಪ ಭೀಮಪ್ಪ ಗೋಕಾಕ ಇವರು ಅಪಘಾತ ಆದ ತಕ್ಷಣ ಸ್ಥಳಕ್ಕೆ ಬಂದಾಗ ಸ್ಥಳದಲ್ಲಿ ಇದ್ದವರನ್ನು ವಿಚಾರಿಸಿದಾಗ ಮೋಟರ ಸೈಕಲ ಬಾಹುರಾಯ ಭೀಮಪ್ಪ ದಾನನ್ನವರ ಚಾಲನೆ ಮಾಡುತ್ತಿದ್ದರು ಎಂದು ಹೇಳಿರುತ್ತಾರೆ.

7. ಮೋಟರ ಸೈಕಲ ನಂ.KA-49/Y-3417ನ ವಿಮೆಯ ಪ್ರತಿಯನ್ನು ಹಾಜರಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಅಪಘಾತ ಆದ ಸಮಯದಲ್ಲಿ ಮೋಟರ ಸೈಕಲ ನಂ.KA-49/Y-3417 ನನ್ನ ಮಗ ಮದ್ಯಪಾನ ಸೇವನೆ ಮಾಡಿ ಚಾಲನೆ ಮಾಡಿಕೊಂಡು ಹೋಗಿ ಟ್ರ್ಯಾಕ್ಟರ ಮತ್ತು ಟ್ರೇಲರಗೆ ಅಪಘಾತಪಡಿಸಿದ್ದು, ಈ ಅಪಘಾತವು ನನ್ನ ಮಗನ ನಿರ್ಲಕ್ಷತನದಿಂದ ಸಂಭವಿಸಿದೆ ಎಂದರೆ ಸರಿಯಲ್ಲ. ನನ್ನ ಮಗ ಚಾಲನಾ ಪತ್ರ ಇಲ್ಲದೇ ಮದ್ಯಪಾನ ಮಾಡಿ ಮೋಟರ ಸೈಕಲ ಚಾಲನೆ ಮಾಡಿಕೊಂಡು ಹೋಗಿ ಅಪಘಾತ ಪಡಿಸಿದ್ದಾರೆ ಎಂದು ಹೇಳಿದ್ದಲ್ಲಿ ಪರಿಹಾರ ಸಿಗುವುದಿಲ್ಲ ಎಂದು ತಿಳಿದು ಬಾಹುರಾಯ ಭೀಮಪ್ಪ ದಾನನ್ನವರ ಚಾಲನೆ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ಅಪಘಾತ ಆದ ಸಮಯದಲ್ಲಿ ಟ್ರ್ಯಾಕ್ಟರ ಮತ್ತು ಟ್ರೇಲರ್ ಚಾಲಕ ಲಕ್ಷ್ಮಣ ಭೀಮಪ್ಪ ನಿಡಸೋಶಿ ಇವರಿಗೆ ಚಾಲನಾ ಪತ್ರ ಇರುವುದಿಲ್ಲ ಎಂದು ತಿಳಿದು ಅಂತಿಮ ವರದಿಯಲ್ಲಿ ರಮೇಶ ಬಸಪ್ಪ ಪಾರಶಿ ಇವರು ಟ್ರ್ಯಾಕ್ಟರ

ಮತ್ತು ಟ್ರೇಲರ್ ಚಾಲನೆ ಮಾಡುತ್ತಿದ್ದರು ಎಂದು ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ರಮೇಶ ಬಸಪ್ಪ ಪಾರಶಿ ಅಪಘಾತ ಆದ ಸಮಯದಲ್ಲಿ ಟ್ರ್ಯಾಕ್ಟರ ನಂ.KA-49/T-1241 ಮತ್ತು ಟ್ರೇಲರ್ ನಂ.KA-49/T-4731 ಮತ್ತು KA-49/T-4732 ಚಾಲನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ ಹಾಗೂ ಸದರಿಯವರು ಅಪಘಾತ ಆದ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಈ ಅಪಘಾತವು ಸಂಪೂರ್ಣವಾಗಿ ನನ್ನ ಮಗನ ನಿರ್ಲಕ್ಷತನದಿಂದ ಸಂಭವಿಸಿದ್ದಕ್ಕಾಗಿ 1 ಮತ್ತು 2ನೇ ಎದುರುದಾರರು ನಮಗೆ ಪರಿಹಾರ ಕೊಡಲು ಜವಾಬ್ದಾರರಲ್ಲ ಎಂದರೆ ಸರಿಯಲ್ಲ.

9. ನನ್ನ ಮಗ ಖಾಸಗಿ ಸಕ್ಕರೆ ಕಾರಖಾನೆಯಲ್ಲಿ ಕೆಲಸ ಮಾಡುತ್ತಿದ್ದ, ಆತನಿಗೆ ತಿಂಗಳಿಗೆ ರೂ.20,000/- ಆದಾಯ ಬರುತ್ತಿತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರ ಮಾಡಿಲ್ಲ. ಅದೇ ರೀತಿ ನನ್ನ ಮಗನಿಗೆ ವರ್ಷಕ್ಕೆ ವ್ಯವಸಾಯದಿಂದ ರೂ.5,00,000/- ಆದಾಯ ಬರುತ್ತಿತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರ ಮಾಡಿಲ್ಲ. ಮುಂದುವರೆದು ಅರ್ಜಿಯಲ್ಲಿ ತೋರಿಸಿದ ವ್ಯವಸಾಯದ ಆದಾಯ ರೂ.5,00,000/- ತಮ್ಮ ಆದಾಯ ಎಂದು ಹೇಳುತ್ತಾರೆ. ಮೃತ ಶಿವಾನಂದ ಇವರ ಮದುವೆ ಆಗಿರಲಿಲ್ಲ ಎಂದರೆ ಸರಿ. ನನ್ನ ಮಗ ಶಿವಾನಂದ ಇವರ ಮರಣಾದಿಂದ ನಮಗೆ ಯಾವುದೇ ಆರ್ಥಿಕವಾಗಿ ನಷ್ಟ ಆಗಿಲ್ಲ ಹಾಗೂ ನಾವು ನನ್ನ ಮಗನ ಆದಾಯದ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ.

10. ಪರಿಹಾರ ಪಡೆಯುವ ಉದ್ದೇಶದಿಂದ ಟ್ರ್ಯಾಕ್ಟರ ಮತ್ತು ಟ್ರೇಲರ್ ಮೇಲೆ ಒಂದು ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಶ್ರೀ.ಆರ್.ಬಿ.ಕೆ. 1ನೇ ಎದುರುದಾರ ಪರ ವಕೀಲರಿಂದಃ</u>**

11. ಈ ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ. ಅಪಘಾತ ಆದ ಸಮಯದಲ್ಲಿ ಮೋಟರ ಸೈಕಲ ನಂ.KA-49/Y-3417 ನನ್ನ ಮಗ ಚಾಲನೆ ಮಾಡುತ್ತಿದ್ದರು ಸಹ ಬಾಹುರಾಯ ಭೀಮಪ್ಪ ದಾನನ್ನವರ ಚಾಲನೆ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

12. ಗೋಕಾಕ-ಮೂಡಲಗಿಯಲ್ಲಿ ಭಗೀರಥ ಸರ್ಕಲನಲ್ಲಿ ಸರ್ಕಲ್ ಬರುವುದಕ್ಕಿಂತ ಮುಂಚೆ ಒಂದು ರೋಡ್ ಹಂಪ್ ಇದೆ ಎಂದರೆ ಸರಿ. ರೋಡ್ ಹಂಪ್ ಇದ್ದುದ್ದರಿಂದ ಎಲ್ಲ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿ. ಟ್ರ್ಯಾಕ್ಟರ ನಂ.KA-49/T-1241 ಮತ್ತು ಟ್ರೇಲರ್ ನಂ.KA-49/T-4731 ಮತ್ತು KA-49/T-4732 ಗೋಕಾಕ ಕಡೆಯಿಂದ ಮೂಡಲಗಿ ಕಡೆಗೆ ಹೋಗುತ್ತಿತ್ತು ಎಂದರೆ ಸರಿ. ಮೂಡಲಗಿ ಕಡೆಗೆ ಹೋಗಬೇಕಾದಲ್ಲಿ ಭಗೀರಥ ಸರ್ಕಲಕ್ಕಿಂತ ಮೊದಲು ಬರುವ ರೋಡ ಹಂಪ್ ದಾಟಿ ಟ್ರ್ಯಾಕ್ಟರ ಮತ್ತು ಟ್ರೇಲರ್ ಹೋಗಬೇಕು ಎಂದರೆ ಸರಿ. ಅಪಘಾತ ಆದ ಸಮಯದಲ್ಲಿ ನನ್ನ ಮಗ ಶಿವಾನಂದ ಮೂಡಲಗಿ ಕಡೆಯಿಂದ ಗೋಕಾಕ ಕಡೆಗೆ ಬರುತ್ತಿದ್ದರು ಎಂದರೆ ಸರಿ.

ಮೂಡಲಗಿ ಕಡೆಯಿಂದ ಗೋಕಾಕ ಕಡೆಗೆ ಬರುವಾಗ ಭಗೀರಥ ಸರ್ಕಲಗಿಂತ ಮುಂಚೆ ರೋಡ ಹಂಪ್ ಇರುವುದಿಲ್ಲ ಎಂದರೆ ಸರಿಯಲ್ಲ.

13. ನನ್ನ ಮಗ ಮದ್ಯಪಾನ ಸೇವನೆ ಮಾಡಿ ಮೂಡಲಗಿ ಕಡೆಯಿಂದ ಗೋಕಾಕ ಕಡೆಗೆ ಮೋಟರ ಸೈಕಲನ್ನು ನಿರ್ಲಕ್ಷತನದಿಂದ ಚಾಲನೆ ಮಾಡಿಕೊಂಡು ಹೋಗಿ ಎದುರುಗಡೆಯಿಂದ ನಿಧಾನವಾಗಿ ಬರುತ್ತಿದ್ದ ಟ್ರ್ಯಾಕ್ಟರ ಮತ್ತು ಟ್ರೇಲರಗೆ ಅಪಘಾತ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅಂತಿಮ ವರದಿಯಲ್ಲಿ ಎಫ್.ಎಸ್.ಎಲ್. ವರದಿಯ ಪ್ರಕಾರ ಅಪಘಾತ ಆದ ಸಮಯದಲ್ಲಿ ನನ್ನ ಮಗ ಮದ್ಯಪಾನ ಸೇವನೆ ಮಾಡಿದ್ದರು ಎಂದು ಹೇಳಲಾಗಿದೆ ಎಂದರೆ ಸರಿಯಲ್ಲ.

14. ಟ್ರ್ಯಾಕ್ಟರ ನಂ.KA-49/T-1241 ಮತ್ತು ಟ್ರೇಲರ್ ನಂ.KA-49/T-4731 ಮತ್ತು KA-49/T-4732 ಖಾಲಿ ಟ್ರೇಲರಗಳು ಇದ್ದವು. ಅಪಘಾತ ಆದ ಸ್ಥಳದಲ್ಲಿಯ ರಸ್ತೆ 35 ರಿಂದ 38ಅಡಿ ಅಗಲ ಇದೆ ಎಂದರೆ ಸರಿಯಲ್ಲ. ಅಪಘಾತ ಆದ ಸ್ಥಳದಲ್ಲಿಯ ರಸ್ತೆ 35 ರಿಂದ 38ಅಡಿ ಅಗಲ ಇದ್ದರೂ ಸಹ ನಿಧಾನವಾಗಿ ಹೋಗುತ್ತಿದ್ದ ಟ್ರ್ಯಾಕ್ಟರ ಮತ್ತು ಟ್ರೇಲರಗೆ ನನ್ನ ಮಗ ಮೋಟರ ಸೈಕಲನ್ನು ಅತೀ ವೇಗ ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿಕೊಂಡು ಹೋಗಿ ಟ್ರ್ಯಾಕ್ಟರ ಮತ್ತು ಟ್ರೇಲರಗೆ ಅಪಘಾತಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಅಪಘಾತದಲ್ಲಿ ಸದರಿ ಟ್ರ್ಯಾಕ್ಟರ ಮತ್ತು ಟ್ರೇಲರ್ ಚಾಲಕನ ಯಾವುದೇ ನಿರ್ಲಕ್ಷತನದಿ ಇಲ್ಲದೇ ಇದ್ದರೂ ಸಹ ಟ್ರ್ಯಾಕ್ಟರ ಮತ್ತು ಟ್ರೇಲರನ ಚಾಲಕನ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

ಎಂ.ವಿ.ಸಿ. ನಂಃ 1742/2025
ಪಿ.ಡಬ್ಲ್ಯೂ-1 (ಲಗಮಪ್ಪ)

15. ಅಪಘಾತ ಆದ ಸಮಯದಲ್ಲಿ ನನ್ನ ಮಗ ಹೆಲ್ಮೆಟ್ ಹಾಕಿರಲಿಲ್ಲ. ಈ ಅಪಘಾತದಲ್ಲಿ ನನ್ನ ಮಗನಿಗೆ ಭುಜಕ್ಕ ಮತ್ತು ತಲೆಗೆ ಗಾಯಗಳಾಗಿದ್ದರಿಂದ ಮೃತಪಟ್ಟಿದ್ದಾರೆ ಎಂದು ಪಿ.ಎಂ. ವರದಿಯಲ್ಲಿ ಹೇಳಲಾಗಿದೆ ಎಂದರೆ ಸರಿ. ಮೋಟರ ಸೈಕಲ ನಂ.KA-49/Y-3417 ಮೃತ ನನ್ನ ಮಗ ಶಿವಾನಂದ ಇವರ ಹೆಸರಿನಲ್ಲಿ ಇದೆ. ಸದರಿ ಮೋಟರ ಸೈಕಲಗೆ ವಿಮೆ ಇತ್ತು, ಯಾವ ಕಂಪನಿಯ ವಿಮೆ ಇತ್ತು ಎಂದು ನನಗೆ ನೆನಪಿಲ್ಲ. ಮೋಟರ ಸೈಕಲನ ವಿಮಾ ಕಂಪನಿಯನ್ನು ಈ ಅರ್ಜಿಯಲ್ಲಿ ಸೇರಿಸಲು ನಮಗೆ ಯಾವುದೇ ತೊಂದರೆ ಇರುವುದಿಲ್ಲ. ಅಪಘಾತ ಆದ ಸಮಯದಲ್ಲಿ ನನ್ನ ಮಗನಿಗೆ ಚಾಲನಾ ಪತ್ರ ಇರಲಿಲ್ಲ, ನನ್ನ ಮಗ ಹೆಲ್ಮೆಟ್ ಧರಿಸಿರಲಿಲ್ಲ ಮತ್ತು ಸದರಿ ಮೋಟರ ಸೈಕಲಗೆ ವಿಮೆ ಇರಲಿಲ್ಲ, ಆದ್ದರಿಂದ ನಮಗೆ ಪರಿಹಾರ ಸಿಗುವುದಿಲ್ಲ ಎಂದು ತಿಳಿದು ಟ್ರ್ಯಾಕ್ಟರ ಮತ್ತು ಟ್ರೇಲರ್ ಚಾಲಕನ ಮೇಲೆ ಸುಳ್ಳು ದೂರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲು 2ನೇ ಎದುರುದಾರ ಪರ ವಕೀಲರು ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ